ಕರ್ನಾಟಕ ಸರ್ಕಾರ

# ರಾಷ್ಟ್ರೀಯ ಆರೋಗ್ಯ ಅಭಿಯಾನ

**ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು**
**1ನೇ ಮಹಡಿ, ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು-23**

**ಸಂಖ್ಯೆ:ಎನ್‌ಹೆಚ್‌ಎಂ/ಡಿಡಿ/ಐಎಂಎಂ/20/2021-22** **ದಿನಾಂಕ:20.05.2021**

**ಇವರಿಗೆ,**

1. ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
2. ಎಲ್ಲಾ ಜಿಲ್ಲಾ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಕಛೇರಿ.

**ಮಾನ್ಯರೆ,**

ವಿಷಯ: 18 ರಿಂದ 44 ವರ್ಷ ವಯೋಮಾನದವರಲ್ಲಿ ಆದ್ಯತೆ ಗುಂಪುಗಳನ್ನು ಗುರುತಿಸಿ ಕೋವಿಡ್-19 ಲಸಿಕಾಕರಣವನ್ನು ನಡೆಸುವ ಕುರಿತು.

ಉಲ್ಲೇಖ:
1. ದಿನಾಂಕ 15.05.2021 ರಂದು ನಡೆದ ರಾಜ್ಯಮಟ್ಟದ ಕಾರ್ಯಪಡೆ ಸಭೆಯಲ್ಲಿ ಚರ್ಚಿಸಿದಂತೆ.
2. ದಿನಾಂಕ: 20.05.2021 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ

*****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 18 ರಿಂದ 44 ವರ್ಷದ ಫಲಾನುಭವಿಗಳಿಗೆ ಕೋವಿಡ್ ಲಸಿಕಾಕರಣಕ್ಕಾಗಿ ಕೋವಿಡ್ ಲಸಿಕೆಗಳನ್ನು ರಾಜ್ಯ ಸರ್ಕಾರವು ಖರೀದಿಸಿದ್ದು, ದಿನಾಂಕ 15.05.2021 ರ ರಾಜ್ಯಮಟ್ಟದ ಕಾರ್ಯಪಡೆ ಸಭೆಯಲ್ಲಿ ಚರ್ಚಿಸಿದಂತೆ ಗುರುತಿಸಲಾದ ಸಮೂಹಗಳಿಗೆ ಆದ್ಯತೆಯ ಮೇರೆಗೆ ಕೋವಿಡ್ ಲಸಿಕಾಕರಣವನ್ನು ನಡೆಸಲು ನಿರ್ದೇಶಿಸಲಾಗಿರುತ್ತದೆ ಹಾಗೂ ದಿನಾಂಕ: 20.05.2021 ರಂದು ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಚರ್ಚಿಸಿದಂತೆ ಆದ್ಯತೆ ಗುಂಪುಗಳನ್ನು ಗುರುತಿಸಲಾಗಿದೆ.

- 18 ರಿಂದ 44 ವರ್ಷದ ಫಲಾನುಭವಿಗಳಿಗೆ ದಿನಾಂಕ 22.05.2021 ರಿಂದ ಪ್ರಾರಂಭಿಸಲು ಉದ್ದೇಶಿಸಲಾಗಿದೆ.
- 18 ರಿಂದ 44 ವರ್ಷದ ಫಲಾನುಭವಿಗಳಿಗೆ ಆದ್ಯತೆ ಮೇರೆಗೆ ಈ ಕೆಳಗೆ ತಿಳಿಸಿರುವ **ರಾಜ್ಯ ಗುರುತಿಸಿರುವ ಕರೋನ ಮುಂಚೂಣಿ ಕಾರ್ಯಕರ್ತರಿಗೆ** ಕೋವಿಡ್ ಲಸಿಕಾಕರಣವನ್ನು ನಡೆಸಲಾಗುತ್ತದೆ. **(ಅನುಬಂಧ-1)**
- ಮುಂದಿನ ದಿನಗಳಲ್ಲಿ **ಆದ್ಯತೆ ಗುಂಪುಗಳಿಗೆ** ಕೋವಿಡ್ ಲಸಿಕಾಕರಣವನ್ನು ನಡೆಸಲಾಗುತ್ತದೆ. **(ಅನುಬಂಧ-2)**

ಅರುಂಧತಿ

**ಅನುಷ್ಠಾನ ಮಾರ್ಗಸೂಚಿ:**

1. **ಅನುಷ್ಠಾನಾಧಿಕಾರಿಗಳು:** ಜಿಲ್ಲಾಮಟ್ಟದಲ್ಲಿ ಮತ್ತು ಬಿಬಿಎಂಪಿ ವ್ಯಾಪ್ತಿಯಲ್ಲಿ ಈ ಕೆಳಕಂಡ ಅನುಷ್ಠಾನಾಧಿಕಾರಿಗಳು 18 ರಿಂದ 44 ವರ್ಷದ ಫಲಾನುಭವಿಗಳಿಗೆ ಕೋವಿಡ್ ಲಸಿಕಾಕರಣದ ಪ್ರಭಾರಿಗಳಾಗಿರುತ್ತಾರೆ.

   **ಬಿಬಿಎಂಪಿ**– ಮುಖ್ಯ ಆಯುಕ್ತರು, ಬಿಬಿಎಂಪಿ.

   **ಜಿಲ್ಲೆಗಳು** – ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತ ಕಛೇರಿ.

2. **ಅನುಷ್ಠಾನಾಧಿಕಾರಿಗಳ ಜವಾಬ್ದಾರಿಗಳು:**
   - ತಮ್ಮ ವ್ಯಾಪ್ತಿಯಲ್ಲಿನ ಆದ್ಯತೆಯ ಗುಂಪುಗಳ ಪಟ್ಟಿಯ ಅಂತಿಮಗೊಳಿಸುವಿಕೆ.
   - ಪ್ರತಿ ಗುಂಪಿನ ಕೋವಿಡ್‌–19 ಲಸಿಕಾಕರಣದ ಸಫಲಗೊಳಿಸುವುವಿಕೆಗೆ ನೋಡಲ್ ಅಧಿಕಾರಿಗಳನ್ನು ನೇಮಿಸುವುದು.
   - ಆಯಾ ಗುಂಪಿನ ನೋಡಲ್ ಅಧಿಕಾರಿಗಳು ಪ್ರತಿ ಫಲಾನುಭವಿಗಳಿಗೆ ಕೋವಿಡ್–19 ಲಸಿಕಾಕರಣಕ್ಕಾಗಿ ಅರ್ಹತಾ ಪ್ರಮಾಣ ಪತ್ರವನ್ನು (ಮಾದರಿ ಲಗತ್ತಿಸಿದೆ – ಅನುಬಂಧ–3) ಒದಗಿಸುವುದು.
   - ನೋಡಲ್ ಅಧಿಕಾರಿಗಳು ಆಯಾ ಗುಂಪಿನ ಫಲಾನುಭವಿಗಳಿಗೆ ನಿಗದಿಗೊಳಿಸಿದ ದಿನಾಂಕ, ಸಮಯ ಮತ್ತು ಸ್ಥಳದ ಮಾಹಿತಿಯನ್ನು ಮುಂಚಿತವಾಗಿ ನೀಡಿ ಅವರನ್ನು ಲಸಿಕಾ ಸತ್ರಗಳಿಗೆ ಸಜ್ಜುಗೊಳಿಸಬೇಕು.
   - ಕೋವಿಡ್–19 ಲಸಿಕಾಕರಣ ನಡೆಸಲಾದ ನವಿಕರಿಸಲಾದ ಮಾಹಿತಿಯನ್ನು ದೈನಂದಿನ ಮಾಹಿತಿಯನ್ನು ಒದಗಿಸಬೇಕು.
   - **ಕೋವಿಡ್–19 ಲಸಿಕಾಕರಣ ಅನುಷ್ಠಾನ**

   ಜಿಲ್ಲೆಯ ಆರೋಗ್ಯ ಇಲಾಖೆಯ ರಾಷ್ಟ್ರೀಯ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ಇದರ ಅನುಷ್ಠಾನಕ್ಕಾಗಿ

   - 18 ರಿಂದ 44 ವರ್ಷದ ಫಲಾನುಭವಿಗಳಿಗೆ ಕೋವಿಡ್ ಲಸಿಕಾಕರಣಕ್ಕಾಗಿ ರಾಜ್ಯ ಸರ್ಕಾರವು ಖರೀದಿಸಿದ ಕೋವಿಡ್ ಲಸಿಕೆಗಳನ್ನು ಮಾತ್ರ ಬಳಸಿಕೊಂಡು ಇದನ್ನು ಅನುಷ್ಠಾನಗೊಳಿಸುವುದು
   - ಸದರಿ ಲಸಿಕೆಗಳ ಲಭ್ಯತೆಯನ್ನು ಜಿಲ್ಲೆಗಳಲ್ಲಿ ಖಾತರಿಪಡಿಸಿಕೊಳ್ಳುವುದು.
   - ಲಭ್ಯವಿರುವ ಲಸಿಕೆ, ಮಾನವ ಸಂಪನ್ಮೂಲ, ಅರ್ಹ ಫಲಾನುಭವಿಗಳ ಸಂಖ್ಯೆಯನ್ನಾಧರಿಸಿ ಸೂಕ್ಷ್ಮ ಕ್ರಿಯಾ ಯೋಜನೆ ತಯಾರಿಸುವುದು.
   - ಆಯ್ದ ಗುಂಪಿನ ಕೋವಿಡ್–19 ಲಸಿಕಾಕರಣಕ್ಕಾಗಿ ಸ್ಥಳ ನಿಗದಿಪಡಿಸಿಕೊಳ್ಳುವುದು.
   - ಲಸಿಕೆಯ ಲಭ್ಯತೆಯ ಅನುಸಾರವಾಗಿ ಪ್ರತಿ ದಿನ ಕೈಗೊಳ್ಳಬಹುದಾದ ಕೋವಿಡ್–19 ಲಸಿಕಾಕರಣ ಸಾಮರ್ಥ್ಯವನ್ನು ನಿಗದಿಪಡಿಸಿಕೊಳ್ಳುವುದು.
   - ಯಾವ ದಿನಾಂಕದಂದು ಯಾವ ಆದ್ಯತೆಯ ಗುಂಪಿಗೆ ಮತ್ತು ಎಲ್ಲಿ ಲಸಿಕಾಕರಣವನ್ನು ಆಯೋಜಿಸಲಾಗಿದೆ ಎಂಬ ಮಾಹಿತಿಯನ್ನು ಮುಂಚಿತವಾಗಿ ಸಂಬಂಧಪಟ್ಟ ನೋಡಲ್ ಅಧಿಕಾರಿಗಳಿಗೆ ಆ ಗುಂಪಿನ ಫಲಾನುಭವಿಗಳನ್ನು ಲಸಿಕಾ ಕೇಂದ್ರಕ್ಕೆ ಸಜ್ಜುಗೊಳಿಸಲು ಮಾಹಿತಿ ನೀಡುವುದು.
   - ಕೋವಿಡ್–19 ಲಸಿಕಾಕರಣದ ಎಲ್ಲಾ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಅನುಸರಿಸುವುದು.
   - Work place vaccination ಅನ್ನು SOP ಯಂತೆ ಅನುಷ್ಠಾನಗೊಳಿಸುವುದು.

- Cohort mobilization ಮಾಡಿ ಆನ್‌ಸೈಟ್ ನೋಂದಣಿ ಮಾಡಿ ಲಸಿಕಾಕರಣ ನಡೆಸಿ ಕೋವಿನ್ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ಇಂದೀಕರಿಸುವುದು

ಈ ಆದ್ಯತೆ ಗುಂಪುಗಳ ಕೋವಿಡ್-19 ಲಸಿಕಾಕರಣದ ಯಶಸ್ಸಿಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಸಹಯೋಗ ಏರ್ಪಡಿಸುವುದು.

ಆದ್ಯತೆ ಗುಂಪುಗಳ ಎಲ್ಲಾ ಫಲಾನುಭವಿಗಳ ಕೋವಿಡ್ ಲಸಿಕಾಕರಣದ ಸಂಪೂರ್ಣತೆಯನ್ನು ಖಚಿತಪಡಿಸಿಕೊಳ್ಳುವುದು.

ಪ್ರತಿ ಆದ್ಯತೆ ಗುಂಪಿನ ಕೋವಿಡ್-19 ಲಸಿಕಾಕರಣದ ದೈನಂದಿನ ವರದಿಯನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಢೀಕರಿಸಿ ರಾಜ್ಯ ಮಟ್ಟಕ್ಕೆ ವರದಿಯನ್ನು ಸಲ್ಲಿಸಲು ಕೋರಲಾಗಿದೆ.

ಅರುಂಧತಿ 20/5/21.

**ಅಭಿಯಾನ ನಿರ್ದೇಶಕರು**
**ರಾಷ್ಟ್ರೀಯ ಆರೋಗ್ಯ ಅಭಿಯಾನ**
**ಬೆಂಗಳೂರು**

**ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು.
2. ಮುಖ್ಯ ಆರೋಗ್ಯಾಧಿಕಾರಿಗಳು (ಸಾರ್ವಜನಿಕ ಆರೋಗ್ಯ), ಬಿಬಿಎಂಪಿ.
3. ಎಲ್ಲಾ ಜಿಲ್ಲೆಯ ಆರ್.ಸಿ.ಹೆಚ್ ಅಧಿಕಾರಿಗಳು.
4. ಲಸಿಕಾಧಿಕಾರಿಗಳು (ಬಿ.ಬಿ.ಎಂ.ಪಿ)

**ಮಾಹಿತಿಗಾಗಿ:**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ.
2. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು.
4. ವಿಶೇಷ ಆಯುಕ್ತರು (ಆರೋಗ್ಯ), ಬಿಬಿಎಂಪಿ.
5. ಎಲ್ಲಾ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಛೇರಿ.
6. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
7. ಅಪರ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
8. ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
9. ಉಪ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಬೆಂಗಳೂರು.
10. ಉಪ ನಿರ್ದೇಶಕರು (ಲಸಿಕೆ), ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು.
11. ಕಛೇರಿ ಪ್ರತಿ.

**ಅನುಬಂಧ-1**

**ರಾಜ್ಯ ಕರೋನ ಮುಂಚೂಣಿ ಕಾರ್ಯಕರ್ತರು**

- ಅಂಗವೈಕಲ್ಯ ಹೊಂದಿರುವ (ಮಾನಸಿಕ ಅಸ್ವಸ್ಥತೆ ಸೇರಿದಂತೆ) ಫಲಾನುಭವಿಗಳು ಮತ್ತು ಒಬ್ಬ ಆರೈಕೆದಾರರು.
- ಖೈದಿಗಳು
- ಚಿತಾಗಾರ/ಸ್ಮಶಾನ/ರುದ್ರಭೂಮಿಯಲ್ಲಿ ಕೆಲಸ ಮಾಡುವ ಸಿಬ್ಬಂದಿ ಹಾಗೂ ಸ್ವಸಹಾಯಕರು.
- ಆರೋಗ್ಯ ಕಾರ್ಯಕರ್ತರ ನಿಕಟ ಕುಟುಂಬಸ್ಥರು.
- ಕೋವಿಡ್-19 ಕರ್ತವ್ಯಕ್ಕೆ ನಿಯೋಜಿಸಲಾದ ಶಿಕ್ಷಕರು.
- ಸರ್ಕಾರಿ ಸಾರಿಗೆ ಸಿಬ್ಬಂದಿ.
- ಆಟೋ ಮತ್ತು ಕ್ಯಾಬ್ ಚಾಲಕರು.
- ವಿದ್ಯುತ್ ಮತ್ತು ನೀರು ಸರಬರಾಜು ಮಾಡುವವರು.
- ಅಂಚೆ ಇಲಾಖೆಯ ಸಿಬ್ಬಂದಿಗಳು.
- ಬೀದಿ ಬದಿಯ ವ್ಯಾಪಾರ ಮಾಡುವವರು.
- ಭದ್ರತೆ ಮತ್ತು ಕಛೇರಿಗಳ ಹೌಸ್‌ಕೀಪಿಂಗ್ ಸಿಬ್ಬಂದಿಗಳು.
- ನ್ಯಾಯಾಂಗ ಅಧಿಕಾರಿಗಳು.
- ವಯೋವೃದ್ಧರ / ತೀವ್ರ ಅನಾರೋಗ್ಯದಿಂದ ಬಳಲುತ್ತಿರುವವರ ಆರೈಕೆದಾರರು.
- ಮಕ್ಕಳ ಸಂರಕ್ಷಣಾಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ.
- ಮಾಧ್ಯಮದವರು.
- ಆಸ್ಪತ್ರೆಗಳಿಗೆ ಸರಕು ಸರಬರಾಜು ಮಾಡುವ ವ್ಯಕ್ತಿಗಳು.
- ಆಯಿಲ್ ಇಂಡಸ್ಟ್ರಿ ಮತ್ತು ಗ್ಯಾಸ್ ಸರಬರಾಜು ಮಾಡುವವರು (ಪೆಟ್ರೋಲ್ ಬಂಕ್, ಕರ್ಮಚಾರಿ ಒಳಗೊಂಡಂತೆ).
- ಔಷದಿ ತಯಾರಿಸುವ ಕಂಪನಿಯ ಸಿಬ್ಬಂದಿಗಳು.
- ಆಸ್ಪತ್ರೆಗಳಿಗೆ ಆಕ್ಸಿಜನ್, ಔಷಧಿಗಳು ಮತ್ತು ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡುವ ಸಿಬ್ಬಂದಿಗಳು.
- ಅಧಿಕೃತ ಗುರುತಿನ ಚೀಟಿ ಹೊಂದಿರದ ಫಲಾನುಭವಿಗಳು (ಉದಾಹರಣೆ: ವೃದ್ಧಾಶ್ರಮ ವಾಸಿಗಳು, ನಿರ್ಗತಿಕರು)
- ಭಾರತೀಯ ಆಹಾರ ನಿಗಮ ಸಿಬ್ಬಂದಿಗಳು.
- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎ.ಪಿ.ಎಂ.ಸಿ.) ಕೆಲಸಗಾರರು

**ಅನುಬಂಧ-2**

**ಆದ್ಯತೆ ಗುಂಪು**

1. ಕಟ್ಟಡ ಕಾರ್ಮಿಕರು
2. ಟೆಲಿಕಾಮ್ ಮತ್ತು ಇಂಟರ್‌ನೆಟ್ ಸೇವಾದಾರರು
3. ವಿಮಾನಯಾನ ಸಂಸ್ಥೆಗಳ ಸಿಬ್ಬಂದಿಗಳು
4. ಬ್ಯಾಂಕ್ ಸಿಬ್ಬಂದಿ
5. ಪೆಟ್ರೋಲ್ ಬಂಕ್‌ನ ಕೆಲಸಗಾರರು.
6. ಚಿತ್ರೋದ್ಯಮದ ಉದ್ಯಮಿ/ಕಾರ್ಯಕರ್ತ/ಸಿಬ್ಬಂದಿ
7. ಅಡ್ವೊಕೇಟ್‌ಗಳು
8. ಹೋಟೆಲ್ ಮತ್ತು ಆತಿಥ್ಯ ಸೇವಾದಾರರು.
9. ಕೆ.ಎಂ.ಎಫ್ ಸಿಬ್ಬಂದಿಗಳು
10. ರೈಲ್ವೆ ಸಿಬ್ಬಂದಿಗಳು.
11. ಗಾರ್ಮೆಂಟ್ ಕಾರ್ಖನೆ ಸಿಬ್ಬಂದಿಗಳು.
12. ಅರಣ್ಯ ಇಲಾಖೆ ಸಿಬ್ಬಂದಿಗಳು.
13. ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿಗಳು.
14. GAIL ಸಿಬ್ಬಂದಿಗಳು.
15. RSK ಕೆಲಸಗಾರರು.
16. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸುವ ಆಟಗಾರರು.
17. ಸ್ವಧಾರ್ ಗೃಹ ವಾಸಿಗಳು ಮತ್ತು ರಾಜ್ಯ ಮಹಿಳಾ ನಿಲಯವಾಸಿಗಳು. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ)
18. ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ ಸಂಸ್ಥೆಯ ಸಿಬ್ಬಂದಿಗಳು

ಅರುಂಧತಿ

## Annexure 3

**Eligibility certificate for the purpose of COVID vaccination (State Corona frontline warriors /Priority group aged 18 years to 44 years)**

**Details of beneficiary:**

1. Category of beneficiary State FLW category to be specified as per defined list — FLW/ Priority
2. ID type proposed to be used for vaccination PAN/Passport/Aadhar/Driving License/ Voter ID/NPR Smart Card ____________________
3. ID Card Number *
4. If no ID available (facilitator ID and Phone no.)
5. Name (as recorded in the selected ID card) ____________________
6. Gender — Male/Female/Other
7. Year of birth (as recorded in selected ID card) ____________________

**Details of the workplace:**

1. Name of the Health Facility/Office/workplace/category ____________________
2. Department ____________________
3. Full address ____________________
____________________

Pin Code : ____________________

It is hereby certified that the details given hereinabove are correct as per the employment records* of Dr./Shri/Smt. ____________________

*Any other authentic record please specify

Signature of Employee
Designation: ________
Mobile Number: ____________

Signature of authorized official
Name: ____________________
Designation: ____________________
Mobile number: ____________

Date of issuing: ____________

Place of issue : ____________

(Office Seal)